# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 185 |
| ಸದಸ್ಯರ ಹೆಸರು | : | ಶ್ರೀ ಸಿ.ಎಂ.ಇಬ್ರಾಹಿಂ,<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 16-02-2022 |
| ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಕರ್ನಾಟಕದಲ್ಲಿ ಒಟ್ಟು ಎಷ್ಟು ರಾಜ್ಯ ಹೆದ್ದಾರಿಗಳನ್ನು ನಿರ್ಮಿಸಲಾಗಿದೆ; ರಾಜ್ಯ ಹೆದ್ದಾರಿ ನಿರ್ಮಾಣದಲ್ಲಿ ಕೇಂದ್ರ ಸರ್ಕಾರದ ಪಾಲಿದೆಯೇ; (ಹೌದಾದಲ್ಲಿ ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 29072.58 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ಗಳಿರುತ್ತವೆ. ಸದರಿ ರಾಜ್ಯ ಹೆದ್ದಾರಿಯಲ್ಲಿ CRF ಯೋಜನೆ ಯಡಿಯಲ್ಲಿ 2016-17ನೇ ಸಾಲಿನಲ್ಲಿ 67 ಕಾಮಗಾರಿಗಳ ಮುಖಾಂತರ 688.91 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಯನ್ನು ರೂ.444.50 ಕೋಟಿಗಳ ಅನುಮೋದಿತ ಮೊತ್ತಕ್ಕೆ ಅಭಿವೃದ್ಧಿಪಡಿಸಲು ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಮಂಜೂರು ಮಾಡಲಾಗಿರುತ್ತದೆ. (ವಿವರ ಅನುಬಂಧ-1 ರಲ್ಲಿ ಲಗತ್ತಿಸಿದೆ).<br><br>KRDCL ವತಿಯಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP-VGF (VGF Projects) ಯೋಜನೆಯಡಿಯಲ್ಲಿ ನಾಲ್ಕು ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲಾಗಿದೆ. (ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ).<br><br>ಉಳಿದಂತೆ ರಾಜ್ಯ ಸರ್ಕಾರದ ಅನುದಾನದಲ್ಲಿ ರಾಜ್ಯ ಹೆದ್ದಾರಿಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದೆ. ಇದರಲ್ಲಿ ಕೇಂದ್ರ ಸರ್ಕಾರದ ಅನುದಾನವಿರುವುದಿಲ್ಲ. |
| ಆ | ನಿರ್ಮಿಸಲಾದ ಹೆದ್ದಾರಿಗಳ ನಿರ್ವಹಣೆಯನ್ನು ಯಾರಿಗೆ ವಹಿಸಲಾಗುವುದು; ಅದರ ಮಾನದಂಡಗಳೇನು: (ಸಂಪೂರ್ಣ ಮಾಹಿತಿ ನೀಡುವುದು) | ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿರುವ ರಾಜ್ಯ ಹೆದ್ದಾರಿಗಳ ಸುಧಾರಣೆ ಹಾಗೂ ನವೀಕರಣ ಕಾಮಗಾರಿಗಳನ್ನು ಗುತ್ತಿಗೆದಾರರಿಗೆ ವಹಿಸಿ, ಪೂರ್ಣಗೊಂಡ ನಂತರ ಗುತ್ತಿಗೆ ವಹಿಸಿಕೊಂಡ ಗುತ್ತಿಗೆದಾರರೇ ಲೋಕೋಪಯೋಗಿ ಇಲಾಖೆ ಸಂಹಿತೆ 2014ರ ಪ್ಯಾರಾ 192 ಹಾಗೂ ಗುತ್ತಿಗೆ ನಿಯಮಾವಳಿ ಗಳಂತೆ ಒಂದು ವರ್ಷದ ಅವಧಿಯವರೆಗೆ (ಡಿ.ಎಲ್.ಪಿ) ರಸ್ತೆ ನಿರ್ವಹಣೆಯನ್ನು ಮಾಡಬೇಕಾಗುತ್ತದೆ. ತದನಂತರದಲ್ಲಿ ಸರ್ಕಾರದಿಂದ ಹಂಚಿಕೆಯಾಗುವ ವಾರ್ಷಿಕ ನಿರ್ವಹಣೆ ಅನುದಾನದ ಲಭ್ಯತೆಗನುಗುಣವಾಗಿ ಹಾಗೂ ವಾಸ್ತವಿಕ ಸ್ಥಿತಿಗತಿಗನುಗುಣವಾಗಿ ರಾಜ್ಯ ಹೆದ್ದಾರಿ ಕಾಮಗಾರಿಗಳ ನಿರ್ವಹಣೆಯನ್ನು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ಟೆಂಡರ್ ಕರೆದು ಗುತ್ತಿಗೆ ನಿಯಮಾವಳಿಗಳಂತೆ ಅರ್ಹ ಗುತ್ತಿಗೆದಾರರಿಗೆ ವಹಿಸಿ, ಕೈಗೆತ್ತಿಕೊಂಡು ರಸ್ತೆಗಳನ್ನು ಸುಸ್ಥಿತಿಯಲ್ಲಿಟ್ಟು ವಾಹನ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗುತ್ತಿದೆ. |

| ಕ್ರ.ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| | | KRDCL ವತಿಯಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಯೋಗದೊಂದಿಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ (PPP-BOT/DBFOT-VGF (Viability Gap Funding) Toll ಆಧಾರದಡಿಯಲ್ಲಿ ಕೈಗೊಳ್ಳುವ ಯೋಜನೆಗಳಿಗೆ ಶೇಕಡ 40 ಗರಿಷ್ಠ VGF ಮೊತ್ತ (20% ರಾಜ್ಯ ಸರ್ಕಾರ ಮತ್ತು 20% ಕೇಂದ್ರ ಸರ್ಕಾರ) ಉಳಿದ 60% ರಷ್ಟು ಮೊತ್ತವನ್ನು ರಿಯಾಯಿತಿದಾರರು ಭರಿಸಬೇಕಾಗಿರುತ್ತದೆ. ಸದರಿ ಯೋಜನಾ ರಸ್ತೆಗಳನ್ನು ರಿಯಾಯಿತಿ ಕರಾರಿನನ್ವಯ ರಿಯಾಯಿತಿದಾರರೇ ನಿಗದಿತ ಅವಧಿ ಮುಗಿಯುವವರೆಗೆ ರಸ್ತೆ ಕಾರ್ಯಾಚರಣೆ ಮತ್ತು ನಿರ್ವಹಣೆ ಕಾರ್ಯವನ್ನು ಮಾಡಬೇಕಾಗಿರುತ್ತದೆ. |
| ಇ | ರಾಜ್ಯದಲ್ಲಿ PRAMC ಯೋಜನೆಯಡಿ ಯಾವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ? (ಇದರ ಬಗ್ಗೆ ಸಂಪೂರ್ಣ ಮಾಹಿತಿ ನೀಡುವದು) | ರಾಜ್ಯದಲ್ಲಿ PRAMC ಯೋಜನೆಯಡಿ ರೂಪಿಸಲಾಗುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-3 ರಲ್ಲಿ ಲಗತ್ತಿಸಲಾಗಿದೆ. |

ಕಡತ ಸಂಖ್ಯೆ: ಲೋಇ 42 ಸಿಎನ್‌ಹೆಚ್ 2022 (ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು

LCQ-185 ರ
ಅನುಬಂಧ-1

ಅನುಬಂಧ-೧
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ - 185
ಸದಸ್ಯರ ಹೆಸರು-ಸಿ.ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ - **16.02.2022**

| Sl. No. | Name of work | District | Job No | Length in KM | Length Completed | Sanctioned Project Cost (TPC) in Cr | Taluk | Status |
|---|---|---|---|---|---|---|---|---|
| 1 | Improvements to Black Spots At Kollegala Hasnur Ghat Road | Chamarajanagara | 1619 | 0.40 | 0.40 | 2.00 | Hanur | Completed |
| 2 | Improvements to Black Spots At Bagalakote-Biligiriranganbetta Road SH-57 at Ch 441.80 and 443.00 Km | Chamarajanagara | 1620 | 0.46 | 0.46 | 2.00 | Malavalli | Completed |
| 3 | Improvements to Black Spot on SH-95 Hoskote Venkatagirikote at Yeshwantpur Gate | Kolar | 1642 | 0.39 | 0.49 | 1.00 | Malur | Completed |
| 4 | Improvements road joining SH-17 to Muttathi via Guttalu, Bharathinagara from Km 7-12, 16.30 to 21.00 & 26.5-30 | Mandya | 2001 | 3.00 | 3.00 | 3.00 | Maddur | Completed |
| 5 | Improvements to road from Malur-Bangarpet to State Border | Kolar | 1598 | 27.44 | 27.44 | 60.00 | Malur&Bangarpete | Completed |
| 6 | Improvement BBBT Major District Road from Km.60.00 to 62.30 in K.R. Nagar Tq.in Musuru Dist. | Mysuru | 2187 | 2.20 | 2.20 | 2.50 | KRNagara | Completed |
| 7 | Improvements to Bharamasagar-Bilchodu road & Bharamasagara-Bidarakere road (in selected stretches) | Chitradurga | 1780 | 10.77 | 10.77 | 8.00 | Holalkere | Completed |
| 8 | Improvements to road from Kakkaragolla to SH 25 in Harihar Tq Davanagere District | Davanagere | 1913 | 0.94 | 0.94 | 2.00 | Harihar | Completed |
| 9 | . Tarikere-Hosadurga-V.V.Pura road (SH-24) Km. 50.10 to 52.00 (Hiriyur Circle to St. Anthony School) in Hosadurga Taluk of Chitradurga District. | Chitradurga | 1617 | 1.78 | 1.78 | 2.00 | Hosadurga | Completed |
| 10 | Improvements to road from Ramajogihalli to Nannivala (Challakere taluk) from Km 0.00 to 7.00 | Chitradurga | 1761 | 3.50 | 2.00 | 5.00 | Challakere | Completed |
| 11 | Widening & Improvements to Balya-Nelyadi road from 0.00 to 10.00 Km in Puttur taluk. (CRF-KNT- 2016-17-2094) | Dakshina Kannada | 2094 | 6.07 | 6.07 | 6.00 | Puttur | Completed |
| 12 | Improvements to road from Bellakodi to Karadi via Nagarkodige Ramachandrapura from km 0.00 to 7.00 in Hosanagar Taluka Shimoga District | Shimoga | 1774 | 5.85 | 4.85 | 3.00 | Thirthahalli | Completed |

| Sl. No. | Name of work | District | Job No | Length in KM | Length Completed | Sanctioned Project Cost (TPC) in Cr | Taluk | Status |
|---|---|---|---|---|---|---|---|---|
| 13 | Improvements to road from Araga to Sonle via Kadegadde Bandya Aralasurali Thattikevi from km 0.00 to 13.50 in Thirthahalli Taluka Shimoga District | Shimoga | 1775 | 7.70 | 7.70 | 5.00 | Thirthahalli | Completed |
| 14 | Improvements to road from NH-13 Gurupura, Hasudi, Shettihalli road from km. 0.00 to 12.40 in Shimoga Taluk | Shimoga | 1797 | 6.30 | 6.30 | 5.00 | ShimogaRural | Completed |
| 15 | Improvement to road from Sampekatte-Hebburuli – Makkimane from Km 6.82 to Km. 7.20 and from 0.00 to Km 2.35 Km in Hosanagar Taluk, Shimoga District. | Shimoga | 1920 | 1.00 | 1.00 | 1.50 | Thirthahalli | Completed |
| 16 | Improvements to road from Anandapur-Hotankatte-Chunchanakoppa -Mallapura-Mudabasiddapura-Tyagarti road from Km.0.00 to 14.00 in Shikaripur Tq. In Shimoga Dist. | Shimoga | 2086 | 13.55 | 13.55 | 5.00 | Shikaripura | Completed |
| 17 | Improvements to Bilaki Channapura road from KM 0.00 to 13.00 in Shikaripura Taluk, Shimoga District. | Shimoga | 2087 | 12.90 | 12.90 | 4.00 | Shikaripura | Completed |
| 18 | Improvements from SH 65 to SH 57 Siddapura - Hosasiddapura - Hulliyur - Ramenakoppa from ch. 0.00 to 11.0 | Shimoga | 2103 | 6.50 | 6.50 | 3.00 | Bhadravathi | Completed |
| 19 | Improvements to road from Danasale to Sheeke via Tanikal from km 0.00 to 4.10 and from 7.55 to 11.50 in Thirthahalli taluk | Shimoga | 2117 | 4.85 | 4.85 | 3.00 | Thirthahalli | Completed |
| 20 | **Improvements to Thovinakere Dabbeghatha road from 0.00 to 10.00 in Koratagere taluk (selected reaches)** | **Tumkur** | **1896** | **3.40** | **3.40** | **3.00** | **Koratagere** | **Completed** |
| 21 | **Improvement to Nagamangala Sravanabelagola Road from Mayagonahalli Gate to NH-48 via Hulikere from Ch.0.00 to 1.50 Km** | **Mandya** | **1945** | **2.00** | **2.00** | **2.00** | **Nagamangala** | **Completed** |
| 22 | **Imprvements to road Huliyar- Tiptur vai Matigatta-Halukuruki in Tumkur Dist.selected reaches km 0.00 to 45.00 (Selected Reaches)** | **Tumkur** | **2016** | **5.00** | **5.00** | **3.00** | **Tiptur** | **Completed** |

| Sl. No. | Name of work | District | Job No | Length in KM | Length Completed | Sanctioned Project Cost (TPC) in Cr | Taluk | Status |
|---|---|---|---|---|---|---|---|---|
| 23 | **Improvement and Asphalting to Gollarahatti via Yammethimmanahalli road from Thotadamadagu to R Nallekamanahalli, Benakanahalli from Km 0.00 to 19.00 (Selected reaches) Job No : CRF/KNT/2016-17/1768** | **Tumkur** | **1768** | **5.50** | **5.50** | **4.00** | **Madhugiri** | **Completed** |
| 24 | **Improvements to road from Thannenahalli to channavaderahalli in Koratagere Taluk Tumkur District. Job No: CRF-KNT-2016-17-2055.** | **Tumkur** | **2055** | **3.40** | **3.40** | **2.50** | **Koratagere** | **Completed** |
| 25 | **Improvements to road from Tumbadi-Jonigarahalli road in Koratagere Taluk Tumkur District. Job No: CRF-KNT-2016-17-2057.** | **Tumkur** | **2057** | **5.25** | **5.25** | **5.00** | **Koratagere** | **Completed** |
| 26 | Aurad-Sadashivgada SH-34 from Km Km 458.70 to 459.60 (Mudenur Ghat) | Belagavi | 1608 | 2.00 | 2.00 | 2.00 | Ramdurga | Completed |
| 27 | Improvement of Road Beedi Belavanki SH-56 from Km 36.00 to 41.00 (from Kotabagi to Uppinabetageri) | Dharwad | 1705 | 2.80 | 2.80 | 3.00 | Dharwad | Completed |
| 28 | Improvements to Sindanur Hemadaga SH-30 Road from Km 168.490 to Km 178.50 in Soudatti Taluka of Belgavi Dist. | Belagavi | 1842 | 4.31 | 4.31 | 5.00 | Soundatti | Completed |
| 29 | Improvements to Aurad- Sadashivgad SH-34 Road from Km 445.890 to 442.19 Kms (3.75 Kms) and Badami-Gadachi-Gokak falls SH-134 from Km 26.67 to Km 33.42Kms (6.75Kms ) in Ramdurg Taluk Belagavi Dist. | Belagavi | 1843 | 10.00 | 10.00 | 10.00 | Ramdurga | Completed |
| 30 | Improvements to Ron -Jakali Neregal Abbigeri MDR Road from Km 0.00 to 5.00, Km 17.00 to 21.75 in Ron Taluk Gadag Dist. | Gadag | 1846 | 8.75 | 8.75 | 6.00 | Ron | Completed |
| 31 | Improvements and Widening to Sankeshwar- Sangam SH-44 road from Km 56.00 to 70.00 in Gokak Taluk Belagavi Dist | Belagavi | 1962 | 4.47 | 4.47 | 5.00 | Gokak | Completed |
| 32 | Improvements and Widening to Savadatti SH-103 road from Km 0.00 to 13.29 in Gokak Taluk Belagavi Dist. | Belagavi | 1963 | 6.26 | 6.26 | 5.00 | Gokak | Completed |

| Sl. No. | Name of work | District | Job No | Length in KM | Length Completed | Sanctioned Project Cost (TPC) in Cr | Taluk | Status |
|---|---|---|---|---|---|---|---|---|
| 33 | Improvements Amargoal on Amminbhavi Amaragol road | Dharwad | 2077 | 1.785 | 1.785 | 4.00 | Hubballi | Completed |
| 34 | Improvements Annigeri on Navalgund Annigeri road | Dharwad | 2079 | 1.15 | 1.15 | 5.00 | Navalgund | Completed |
| 35 | Improvements/Ashphalting to road SH 129 to Sulekal to Nandihalli via Benakanal Kalkere Gundur Siddapur km 0.00 to 12.00 in Ganagavathi taluk koppal District | Koppal | 2138 | 7.10 | 7.10 | 8.00 | Ganagavathi | Completed |
| 36 | Improvements/Ashphalting to Karatagi Hanawal road from km 16.00 to 19.80.00 in Ganagavathi taluk koppal District | Koppal | 2139 | 3.23 | 3.23 | 4.00 | Ganagavathi | Completed |
| 37 | Improvements/Ashphalting to Chikkahesarur Mudgal Mundargi SH-129 from km 144.40 to 183.42 in Koppal taluk koppal District | Koppal | 2142 | 24.60 | 24.60 | 20.00 | Koppal | Completed |
| 38 | Improvements/Ashphalting to Gunnal Hasagal via Hirebommanalli road from km 0.00 to 13.00 in Koppal taluk koppal District | Koppal | 2143 | 8.30 | 8.30 | 10.00 | Koppal | Completed |
| 39 | Improvements/Ashphalting to Tanakanakal Kuttaganahalli Basapur road from km 0.00 to 11.00 in Koppal taluk koppal District | Koppal | 2144 | 8.05 | 8.05 | 10.00 | Koppal | Completed |
| 40 | Improvements/Ashphalting to Kailarhatti Tanda cross to Kidadur road from km 0.00 to 13.50 in Kushtagi taluk koppal District | Koppal | 2145 | 13.50 | 13.50 | 10.00 | Kusatgi | Completed |
| 41 | Improvements/Ashphalting to Mudhol Dyamapur road from km 0.00 to 14.00 in Yalburga taluk koppal District | Koppal | 2146 | 14.00 | 14.00 | 18.00 | Yelburga | Completed |
| 42 | Mitigation of black spot near Killa Toragal, SH-139, Ch. 23.60 to 25.00 | Belagavi | 1610 | 0.70 | 0.70 | 2.00 | Ramdurga | Completed |
| 43 | Improvements to Laxmeshwar to Yallapur via Doddur Road from Km 0.00 to 8.00 & Km. 8.500 to 17.500 of Shirahatti Taluka of Gadag Dist. | Gadag | 1703 | 2.30 | 2.30 | 3.00 | shirahatti | Completed |
| 44 | Improvements/Ashphalting to Musalpur Venkatagiri road from km 0.00 to 9.00 in Ganagavathi taluk koppal District | Koppal | 2140 | 9.30 | 9.30 | 10.00 | Ganagavathi | Completed |
| 45 | Improvement of Road from NH-4 to Lokur via Narendra Mangalagatti from Km 4.00 to 5.150 | Dharwad | 2189 | 1.20 | 1.20 | 1.00 | Dharwad | Completed |

| Sl. No. | Name of work | District | Job No | Length in KM | Length Completed | Sanctioned Project Cost (TPC) in Cr | Taluk | Status |
|---|---|---|---|---|---|---|---|---|
| 46 | Aurad Sadashivagad SH.34 (ARTO Office)Km 14.60 to 16.60 (selected reaches of SH-34) | Bidar | 1615 | 1.38 | 1.38 | 2.00 | Aurad | Completed |
| 47 | Improvements to road from Hottinmadu Chamanal Via Hosur Malla, maradagi Laknapur-Shivapur-Mallabal Km 38.00 to 48.00 | Kalaburagi | 1719 | 4.65 | 4.65 | 7.00 | Jewargi | Completed |
| 48 | Improvements to Road SH-149 from Imprortant highway 139.22 TO Km 144.45 ,148.70 to 158.30 and 169.85 to 177.00 (Total Length 21.98Km) Chincholi Tandur Road to Konchavaram | Kalaburagi | 1840 | 8.00 | 8.00 | 8.00 | Chincholi | Completed |
| 49 | Improvements to Road from Telangana State Border Jambagi Hulsur upto join SH-11 near Hulsur from Km 60.600 to 79.600 (selected reaches of SH-123) in Bhalki taluka Bidar District. | Bidar | 2073 | 18.02 | 18.02 | 40.00 | Bhalki | Completed |
| 50 | Improvements to road from Kotanhipparagi to Jamaga (R) from km 149.90 to 151.80 and Kirisultan to Telkamoy km 158.40 to 164.37 (selected reaches of SH-34) in Aland taluk Kalburgi Dist | Kalaburagi | 2137 | 5.74 | 5.74 | 10.00 | Aland | Completed |
| 51 | NH218 Katti Sangavi N Guntta (SH-16) via Madari, Yenagunta, Narigoli, Biral(B) ganvara, Chigaralli, Hijjeri, Hallur, Kadikoli to Manshivangi from Km 32.00 to 42.00 | Kalaburgi | 1720 | 2.26 | 2.26 | 3.00 | Jewargi | Completed |
| 52 | Improvements to SH-122 Murki-Aurad-Chincholi-Sedam-Handarki Road from Km.211.64 to 218.77 in Kalaburagi District | Kalaburagi | 2171 | 3.36 | 3.36 | 5.00 | Sedam | Completed |
| 53 | Road Safety works on Khanapur Talaguppa From Km 38.00 to 201.00 | Uttara Kannada | 1606 | 163.00 | 163.00 | 6.00 | Haliyal/ Yellapur/ Sirsi/ Siddapur | Completed |
| 54 | Road Safety works on Kumta Tadas From Km 0.00 to 142.00 | Uttara Kannada | 1607 | 142.00 | 142.00 | 5.00 | Kumta-Sirsi-Mundgod | Completed |
| 55 | Kumta - Tadas ( SH-69) at Km 110.00 Salgaon Lake in Mundgod Tq. of U.K. Dist | Uttara Kannada | 1641 | 0.22 | 0.22 | 2.00 | Mudgod | Completed |
| 56 | Improvements to Ulvi Diggi Goa Border Road SH 146 from Km. 0.00 to 4.00 in Joida Taluka. | Uttara Kannada | 2159 | 4.00 | 0.00 | 1.50 | Joida | completed |

| l. No. | Name of work | District | Job No | Length in KM | Length Completed | Sanctioned Project Cost (TPC) in Cr | Taluk | Status |
|---|---|---|---|---|---|---|---|---|
| 57 | Improvements/ widening to road from Almatti Dam road to Benakatti Basarikatti Budhihal Ingalagir in selected reaches. (Job No.CRF-KNT-2016-17-1714). | Bagalkot. | 1714 | 7.32 | 7.32 | 5.00 | Bagalkot | Completed |
| 58 | Improvements to road from Mugalkod - Rabhakavi via Sasalatti Kaltippi Golbhaviyargatti from KM 3.00 to 18.85 Kms (Job No.CRF-KNT-2016-17-1762). | Bagalkot. | 1762 | 12.50 | 12.50 | 10.00 | Jamkhandi | Completed |
| 59 | Improvements to road from Todalabagi to Halahalli via Savalagi (in selected reaches) in Jamkhandi, Bagalkot District (Job No.CRF-KNT-2016-17-1765). | Bagalkot. | 1765 | 6.00 | 6.00 | 6.00 | Jamakhandi | Completed |
| 60 | Improvements to Road Mudhol Anagwadi Road in selected reaches from KM 0.00 to 42.00 Km (in selected reaches from Km 22.300 to 24.300). (Job No.CRF-KNT-2016-17-1805). | Bagalkot. | 1805 | 2.00 | 2.00 | 2.00 | Mudhol | Completed |
| 61 | Improvements to Road Hebbala to Kaladagi via Bantanur. (in selected reaches from Km 1.40 to 6.10). (Job No.CRF-KNT-2016-17-1806). | Bagalkot. | 1806 | 4.70 | 4.70 | 3.00 | Bagalkot | Completed |
| 62 | Improvements to road from Shettihalli Ichalakaranji road (SH.78) Km.53.40 to 54.40 & Km.55.10 to 56.78 in Chikkodi taluka Job No.CRF-KNT-2016-17-1988 | Belgavi. | 1988 | 1.90 | 1.90 | 2.50 | Raibag | Completed |
| 63 | Improvements to road from Hungund palathi via Karadi Km 12.8. (Job No.CRF-KNT- 2016-17-1716) | Bagalkot. | 1716 | 6.60 | 6.60 | 5.00 | Hungund | Completed |
| 64 | Improvements to road from Km 0.00 to 10.00 and Km 26.00 to 31.00 Bidari Honwad via Todalabag Gaddal Gothe in selected reaches. (Job No.CRF-KNT-2016-17-1764) | Bagalkot. | 1764 | 5.34 | 5.34 | 4.00 | Jamakhandi | Completed |
| 65 | Providing Road Safety works on SH 102 Huliyur Keralapur from km 0.00 to km 132.60 in Hassan Dist. -132.60 (selected Reaches) | Hassan | 1603 | NA | - | 7.00 | Arakalgudu | Completed |
| 66 | Providing Road Safety works from Hiresave to Sattehalli Km 0.00 to 110.00 in Selected reaches of SH-8(Hassan dist) | Hassan | 1605 | NA | - | 7.00 | Channarayapatna | Completed |

| Sl. No. | Name of work | District | Job No | Length in KM | Length Completed | Sanctioned Project Cost (TPC) in Cr | Taluk | Status |
|---|---|---|---|---|---|---|---|---|
| 67 | Improvements to road from Hiresave on NH-48 to Shravanabelagola to Channarayapatna in Hasan Dist(Selected reaches). | Hassan | 2047 | 16.00 | 16.00 | 20.00 | Channarayapatna | Completed |

**ಅನುಬಂಧ-1**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 76 (185)
ಮಾನ್ಯ ಸದಸ್ಯರ ಹೆಸರು : **ಶ್ರೀ. ಸಿ. ಎಂ. ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು)**
ವಿಷಯ : **ರಾಜ್ಯ ಹೆದ್ದಾರಿ ನಿರ್ವಹಣೆ ಕುರಿತು.**

| ಕ್ರಸಂ | ಯೋಜನೆ | ರಿಯಾಯತಿದಾರರು | ಜಿಲ್ಲೆ | ಅಂದಾಜು ಯೋಜನಾ ಮೊತ್ತ (ರೂ.ಕೋಟಿಗಳಲ್ಲಿ) | ವಿಜಿಎಫ್ ಮೊತ್ತ (ರೂ.ಕೋಟಿಗಳಲ್ಲಿ) | | ರಿಯಾಯಿತಿ ಅವಧಿ | ಹಂತ |
|---|---|---|---|---|---|---|---|---|
| | | | | | ಕೇಂದ್ರ (*) | ರಾಜ್ಯ (**) | | |
| 1 | ಯಲಹಂಕದಿಂದ-ಆಂಧ್ರ ಪ್ರದೇಶ ಗಡಿ ವರೆಗೆ ಕಿ.ಮೀ 13+800 ರಿಂದ 89+417 ರವರೆಗೆ ರಾಜ್ಯ ಹೆದ್ದಾರಿ-09 ಅನ್ನು ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ DBFOT-VGF (Toll) ಆಧಾರದ ರಸ್ತೆ ಅಭಿವೃದ್ಧಿ ಯೋಜನೆ | ಮೆ॥ ಯಲಹಂಕ – ಎ.ಪಿ.ಬಾರ್ಡರ್ ಟೋಲ್ ವೇ ಪ್ರೈ.ಲಿ., ಬೆಂಗಳೂರು. | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಮತ್ತು ಚಿಕ್ಕಬಳ್ಳಾಪುರ | 380.85 | 76.17 (20%) | 76.16 (19.99%) | 21 ವರ್ಷಗಳು (2 ವರ್ಷ ನಿರ್ಮಾಣ ಅವಧಿ ಮತ್ತು 19 ವರ್ಷಗಳು ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿ) | ಯೋಜನಾ ರಸ್ತೆಯು ಕಾರ್ಯಚಾರಣೆ ಮತ್ತು ನಿರ್ವಹಣೆ ಅವಧಿಯಲ್ಲಿದೆ ಮತ್ತು ರಸ್ತೆಯ ಸುಮಾರು 75.617 ಕಿಮೀ ಪೈಕಿ 74.9 ಕಿಮೀ ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ರಸ್ತೆ ಪ್ರಗತಿಯಲ್ಲಿದೆ |
| 2 | ವಾಗ್ದಾರಿ-ರಿಬ್ಬನ್ ಪಲ್ಲಿ (ರಾಜ್ಯ ಹೆದ್ದಾರಿ -10) ರಸ್ತೆ ಅಭಿವೃದ್ಧಿ ಯೋಜನೆ ಅನ್ನು ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ BOT-VGF (Toll) ಆಧಾರದ ರಸ್ತೆ ಅಭಿವೃದ್ಧಿ ಯೋಜನೆ | ಮೆ॥ ಜಿ.ವಿ.ಆರ್ ಎಂ.ಪಿ ವಾಗ್ದಾರಿ-ರಿಬ್ಬನ್‌ಪಲ್ಲಿ ಟೋಲ್ ವೇ ಪ್ರೈ.ಲೀ., ಬೆಂಗಳೂರು. | ಗುಲ್ಬರ್ಗಾ | 238.58 | 47.71 (20%) | 42.95 (18%) | 30 ವರ್ಷಗಳು (2 ವರ್ಷ ನಿರ್ಮಾಣ ಅವಧಿ ಮತ್ತು 28 ವರ್ಷಗಳು ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿ) | ಯೋಜನಾ ರಸ್ತೆಯು ಕಾರ್ಯಚಾರಣೆ ಮತ್ತು ನಿರ್ವಹಣೆ ಅವಧಿಯಲ್ಲಿದೆ |

| ಕ್ರ.ಸಂ | ಯೋಜನೆ | ರಿಯಾಯತಿದಾರರು | ಜಿಲ್ಲೆ | ಅಂದಾಜು ಯೋಜನಾ ಮೊತ್ತ (ರೂ.ಕೋಟಿಗಳಲ್ಲಿ) | ವಿಜಿಎಫ್ ಮೊತ್ತ (ರೂ.ಕೋಟಿಗಳಲ್ಲಿ) | | ರಿಯಾಯಿತಿ ಅವಧಿ | ಷರಾ |
|---|---|---|---|---|---|---|---|---|
| | | | | | ಕೇಂದ್ರ (*) | ರಾಜ್ಯ (**) | | |
| 3 | ಧಾರವಾಡ-ಅಳ್ನಾವಾರ-ರಾಮನಗರ ವರೆಗೆ ರಸ್ತೆ ಅನ್ನು ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ BOT-VGF (Toll) ಆಧಾರದ ರಸ್ತೆ | ಮೆ॥ ಜಿ.ವಿ.ಆರ್ ಎಂ.ಪಿ ಧಾರವಾಡ ರಾಮನಗರ ಟೋಲ್ ವೇ ಪ್ರೈ.ಲೀ., ಬೆಂಗಳೂರು | ಧಾರಾವಾಡ ಮತ್ತು ಬೆಳಗಾವಿ | 230.29 | 46.06 (20%) | 36.84 (16%) | 30 ವರ್ಷಗಳು (2 ವರ್ಷ ನಿರ್ಮಾಣ ಮತ್ತು 28 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿ) | ಯೋಜನಾ ರಸ್ತೆಯು ಕಾರ್ಯಚಾರಣೆ ಮತ್ತು ನಿರ್ವಹಣೆ ಅವಧಿಯಲ್ಲಿದೆ |
| 4 | ಗಿಣಿಗೇರ-ಗಂಗಾವತಿ-ಸಿಂಧನೂರು ವರೆಗೆ ರಾಜ್ಯ ಹೆದ್ದಾರಿ-23ರ ವರೆಗೆ ರಸ್ತೆ ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ DBFOT-VGF (Toll) ಆಧಾರದ ರಸ್ತೆ ಅಭಿವೃದ್ಧಿ ಯೋಜನೆ | ಮೆ॥ ಸಿಂಧನೂರು ಗಂಗಾವತಿ ಟೋಲ್ ವೇ. ಪ್ರೈ.ಲೀ., ಹೈದಾರಬಾದ್. | ಕೊಪ್ಪಳ ಮತ್ತು ರಾಯಚೂರು | 190.16 | 4.59 % (2.41%) | – | 24 ವರ್ಷಗಳು (2 ವರ್ಷ ನಿರ್ಮಾಣ ಅವಧಿ ಮತ್ತು 22 ವರ್ಷಗಳು ಕಾರ್ಯಾಚರಣೆ ಮತ್ತು ನಿರ್ವಹಣೆ ಅವಧಿ) | ಯೋಜನಾ ರಸ್ತೆಯು ಕಾರ್ಯಚಾರಣೆ ಮತ್ತು ನಿರ್ವಹಣೆ ಅವಧಿಯಲ್ಲಿದೆ |

* ಒಟ್ಟಾರೆ ಯೋಜನಾ ಮೊತ್ತದಲ್ಲಿ ಶೇಕಡವಾರು ರಷ್ಟು ಕೇಂದ್ರ ಪಾಲು

** ಶೇಕಡವಾರು ರಷ್ಟು ರಾಜ್ಯ ಸರ್ಕಾರದ ಪಾಲು

ಮುಖ್ಯ ಇಂಜಿನಿಯರ್
ಕರಅನಿನಿ. ಬೆಂಗಳೂರು

ಅನುಬಂಧ - 3

<u>ವಿಧಾನ ಪರಿಷತ್ತಿನ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: 96 (185)ರ ಲಗತ್ತು ಅನುಬಂಧ-3</u>

ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವು (PRAMC) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿನ ಇಡೀ ರಸ್ತೆ ವ್ಯವಸ್ಥೆಯ ವಸ್ತುನಿಷ್ಠ ವಾರ್ಷಿಕ ಕ್ರಿಯಾ ಯೋಜನೆಯನ್ನು, ಆಧುನಿಕ ಯಂತ್ರೋಪಕರಣಗಳಾದ ROMDAS, FWD, GPR ಮತ್ತು ಬೃಹತ್ ಸೇತುವೆಗಳ ತಪಾಸಣಾ ವಾಹನಗಳನ್ನು ಉಪಯೋಗಿಸಿಕೊಂಡು ರಸ್ತೆ ಸ್ಥಿತಿಗತಿಗಳ, ರಫ್‌ನೆಸ್, ರಟ್ಟಿಂಗ್ ಮತ್ತು ಪೇವ್‌ಮೆಂಟ್‌ನ ಬಲ, ಸೇತುವೆಗಳ ಸ್ಥಿತಿಗತಿಗಳ ದತ್ತಾಂಶ, ಹೆಚ್‌ಡಿಎಮ್–4 ನಂತಹ ಆಧುನಿಕ ತಂತ್ರಾಂಶಗಳ ವಿಶ್ಲೇಷಣೆಯನ್ನು ಬಳಸಿಕೊಂಡು ರಸ್ತೆಗಳ ನಿರ್ವಹಣೆ ಮತ್ತು ಅಭಿವೃದ್ಧಿಪಡಿಸಲು ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಲು ಉಪಕ್ರಮಗಳನ್ನು ಕೈಗೊಳ್ಳುತ್ತಿದೆ.

ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳ ಯೋಜನೆ, ಆಯವ್ಯಯ ತಯಾರಿಕೆ ಮತ್ತು ಕಾರ್ಯಕ್ರಮ ರೂಪಿಸಲು ಒಂದು ಸಂಘಟನಾ ಕೇಂದ್ರ ಕಚೇರಿಯಾಗಿ ಕಾರ್ಯ ನಿರ್ವಹಿಸುತ್ತಿದೆ. PRAMC ಯು ನೀತಿಗಳನ್ನು ಅಭಿವೃದ್ಧಿಪಡಿಸುವ, ಅಭಿವೃದ್ಧಿ ಕಾರ್ಯಕ್ರಮಗಳಿಗೆ ಯೋಜನೆ ರೂಪಿಸುವ, ರಸ್ತೆಗಳ ಸ್ವತ್ತು ನಿರ್ವಹಣೆ ಮಾಡುವ ವಲಯದ ಸರ್ವೋಚ್ಚ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಇಂಜಿನಿಯರುಗಳಿಗೆ ತರಬೇತಿ ನೀಡುವ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ.

ರಾಜ್ಯದ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ರಸ್ತೆಗಳನ್ನು ಮೇಲ್ದರ್ಜೆಗೇರಿಸುವ ಮತ್ತು ಕೆಳದರ್ಜೆಗಿಳಿಸುವ ಪ್ರಸ್ತಾವನೆಗಳನ್ನು ಕ್ರೋಢೀಕರಿಸಿ ಅನುಷ್ಠಾನಗೊಳಿಸಲು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ.

Karnataka Road Asset Management System (KRAMS) ಒಂದು ಸಮಗ್ರವಾದ ಮತ್ತು ಏಕೀಕೃತಗೊಂಡ ತಂತ್ರಾಂಶವಾಗಿದ್ದು, (COTS, RIS, PWP&IWTD, HDM-4 and TMT) ರಸ್ತೆಗಳ ನಿರ್ವಹಣೆಯನ್ನು ಹೆಚ್ಚಿಸುವ ಮತ್ತು ಸುವ್ಯವಸ್ಥಿತಗೊಳಿಸಲು PRAMC ಗೆ ಸಹಕರಿಸಲು ವಿನ್ಯಾಸಗೊಳಿಸಲಾಗಿದೆ. KRAMS ತಂತ್ರಾಂಶವು ರಸ್ತೆಗಳನ್ನು ನಿರ್ವಹಿಸುವಲ್ಲಿ ದತ್ತಾಂಶ ಆಧರಿಸಿದ ವೈಜ್ಞಾನಿಕ ಪ್ರಕ್ರಿಯೆಯಾಗಿದ್ದು, ಆಯವ್ಯಯದ ನಿರ್ಬಂಧದಡಿ ಸ್ವತ್ತುಗಳನ್ನು ನಿರ್ವಹಿಸುವ ಮತ್ತು ಉನ್ನತೀಕರಿಸುವ ವ್ಯವಸ್ಥೆಯಾಗಿರುತ್ತದೆ.
ಅಂತರಾಷ್ಟ್ರೀಯ ಗುಣಮಟ್ಟದ ಅತ್ಯಾಧುನಿಕವಾದ ದತ್ತಾಂಶ ಸಂಗ್ರಹಿಸುವ ಉಪಕರಣಗಳು:

1) Laser Based Road Condition Data Collection Vehicle (RCDCV)
2) Falling Weight Deflectometer (FWD)
3) Ground Penetration Radars (GPR)
4) Bridge Inspection Vehicle (BIV)

<u>Road Measurement Data Acquisition System (ROMDAS)</u>
ರಸ್ತೆ ವಲಯದ ಮೇಲೆ ವ್ಯಯಿಸುವ ಬಂಡವಾಳದ ಆರ್ಥಿಕ ಪರಿಣಾಮಗಳನ್ನು ರೂಪಿಸಲು ರಫ್‌ನೆಸ್ ಒಂದು ನಿರ್ಣಾಯಕ ಅಂಶವಾಗಿರುತ್ತದೆ. ROMDAS ಉಪಕರಣಕ್ಕೆ Laser Profiler ಅಳವಡಿಸಿ ಇಡೀ ಸಿಆರ್‌ಎನ್ ರಸ್ತೆ ಜಾಲದ ರಫ್‌ನೆಸ್ ಸಮೀಕ್ಷೆ ಮಾಡಲಾಗುತ್ತದೆ. ಈ ಉಪಕರಣವನ್ನು ಉಪಯೋಗಿಸಿಕೊಂಡು International Roughness Index (IRI), Rutting, Raveling, Potholing ಇತರೆ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತಿದೆ.

<u>Falling Weight Deflectometer (FWD)</u>
ಈ ಉಪಕರಣವನ್ನು ಸಿವಿಲ್ ಇಂಜಿನಿಯರುಗಳು ರಸ್ತೆಯ ಭೌತಿಕ ಗುಣಲಕ್ಷಣಗಳನ್ನು ಸ್ಥಿತಿಸ್ಥಾಪಕತ್ವದ ಅಂಶವನ್ನೂ ಒಳಗೊಂಡಂತೆ ಮೌಲ್ಯಮಾಪನ ಮಾಡಲು, ತಾಳಿಕೆಯ ಸಾಮರ್ಥ್ಯ ತಿಳಿಯಲು. ಮತ್ತು standard axle load ಬಳಸಿದಾಗ ರಸ್ತೆ ಮೇಲ್ಮೈನ ಕುಗ್ಗುವಿಕೆ ಇತ್ಯಾದಿ ಅರಿಯಲು ಬಳಸುತ್ತಿದ್ದಾರೆ. FWD ಡೇಟಾವನ್ನು ಪ್ರಾಥಮಿಕವಾಗಿ ಹಾಲಿ ಇರುವ ರಸ್ತೆಯ ಮೇಲ್ಮೈನ ಬಲಪಡಿಸುವಿಕೆ ಅವಶ್ಯಕತೆಗಳನ್ನು ತಿಳಿಯಲು ಉಪಯೋಗಿಸಲಾಗುತ್ತಿದೆ. ರಸ್ತೆಯ ಸಾಮರ್ಥ್ಯವು, ವಿನ್ಯಾಸಗೊಳಿಸಿದ ರಸ್ತೆಯ ಜೀವಿತಾವಧಿಯವರೆಗೂ ಸುಸ್ಥಿತಿಯಲ್ಲಿಡಲು ಓವರ್‌ಲೇ ಮಾಡಲು ಹಾಗೂ ರಸ್ತೆಯ ಬಾಕಿ ಜೀವಿತಾವಧಿಯನ್ನು ನಿರ್ಧರಿಸಲು ಸಹಾಯಕವಾಗುತ್ತದೆ.

ಪು.ತಿ.ನೋ.

**Ground Penetrating Radar (GPR)**

ಈ GPR ಉಪಕರಣವು ರಾಡಾರ್ ಪಲ್ಸ್‌ಗಳನ್ನು ಉಪಯೋಗಿಸಿಕೊಂಡು ರಸ್ತೆಯ ಕೆಳಮೈ ಗುಣಲಕ್ಷಣಗಳನ್ನು ಅರಿಯಲು ಭೂ-ಭೌತಿಕ ವಿಧಾನವಾಗಿದ್ದು, ರಸ್ತೆಯ ಪದರಗಳ ದಪ್ಪವನ್ನು ತಿಳಿಯಬಹುದಾಗಿರುತ್ತದೆ. ಹಾಗೂ ಈ GPR ಉಪಕರಣವು ಪದರಗಳ ವಿವರಗಳನ್ನು ಅರಿಯಲು ಹಾನಿಕಾರಕವಲ್ಲದ ಹಾಗೂ ಭೂಮಿಯನ್ನು ಬಗೆಯದೇ ತಿಳಿಯಬಹುದಾದ ಉಪಕರಣವಾಗಿರುತ್ತದೆ.

**Bridge Inspection Vehicle (BIV)**

ಗಣನೀಯವಾಗಿ ಬಂಡವಾಳ ವ್ಯಯಿಸಿ ನಿರ್ಮಿಸಿರುವ ಸೇತುವೆಗಳನ್ನು, ಸಂಭವನೀಯ ವಿಪತ್ತುಗಳಿಂದ ರಕ್ಷಿಸಲು ಮತ್ತು ಸೇತುವೆಗಳ ಕ್ಷಯಿಸುವಿಕೆಯನ್ನು ತಡೆಗಟ್ಟಲು ಕಾಲಕಾಲಕ್ಕೆ ತಪಾಸಣೆ ಮಾಡಬೇಕಾದ, ನಿರ್ವಹಿಸಬೇಕಾದ ಅವಶ್ಯಕತೆ ಇರುತ್ತದೆ. ಈ BIV ಉಪಕರಣವನ್ನು ಉಪಯೋಗಿಸಿಕೊಂಡು ಸೇತುವೆಯ ತಳಭಾಗದಲ್ಲಿ ಹಾಗೂ ಅಂಚುಗಳಲ್ಲಿ ಗಮನಿಸಲಾಗದೇ ಇರುವ ಕ್ಷಯಿಸುವಿಕೆಯನ್ನು ತಿಳಿಯುವ ಸೌಲಭ್ಯವಿರುತ್ತದೆ. ಈ ಉಪಕರಣದಲ್ಲಿ ಸೇತುವೆಯ ಭೌತಿಕ ಮತ್ತು ಕಾರ್ಯತತ್ಪರತೆಯ ಸ್ಥಿತಿಯನ್ನು ಕರಾರುವಾಕ್ಕಾಗಿ ಅರಿಯಲು ಸೌಲಭ್ಯವಿರುತ್ತದೆ. ಸಾಮಾನ್ಯವಾಗಿ ಕೈಗೊಳ್ಳುವ ತಪಾಸಣೆಯ ಜೊತೆಗೆ ಕೆಲವು ಬಾರಿ ಏಣಿಗಳ ಮೂಲಕ ಸುರಕ್ಷಿತವಾಗಿ ತಲುಪಲು ಸಾಧ್ಯವಿರದಿರುವ ಸೇತುವೆಯ ಕೆಲ ನಿರ್ಣಾಯಕ ಭಾಗಗಳಲ್ಲಿ ಅತ್ಯಂತ ಸನಿಹದಿಂದ ಗಮನಿಸಬೇಕಾದ ಸಂದರ್ಭಗಳಲ್ಲಿ ತಪಾಸಣೆಗಳನ್ನು ಕೈಗೊಳ್ಳಲಾಗುತ್ತಿದೆ. ಈ ಉಪಕರಣವನ್ನು ಸೇತುವೆಯ ರಚನೆಯ ವಿಸ್ತೃತವಾಗಿ ಮೌಲ್ಯಮಾಪನ ಮಾಡಲು ಮತ್ತು ಸೇತುವೆಯ ನಿರ್ಣಾಯಕ ಭಾಗಗಳಲ್ಲಿ ಹಾನಿಕಾರಕವಲ್ಲದ ಟೆಸ್ಟ್ ನಡೆಸಲು (ಸೇತುವೆಯ ಸಾಫಿಟ್ ಗಳಲ್ಲಿ, ಬೇರಿಂಗ್ ಲೊಕೇಶನ್‌ಗಳಲ್ಲಿ) ಬಳಸಬಹುದಾಗಿರುತ್ತದೆ. ಈ ತಪಾಸಣೆಯನ್ನು ವಾಹನ ಸಂಚಾರಕ್ಕೆ ಯಾವುದೇ ಧಕ್ಕೆಯುಂಟಾಗದಂತೆ ಅಥವಾ ವಾಹನ ಸಂಚಾರಕ್ಕೆ ಕನಿಷ್ಠ ತೊಂದರೆಯೊಂದಿಗೆ ನಡೆಸಬಹುದಾಗಿರುತ್ತದೆ.

**ರಸ್ತೆ ಸುರಕ್ಷತಾ ಕಾರ್ಯಕ್ರಮಗಳ ಬಗ್ಗೆ:**

ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರವು ರಾಜ್ಯದಲ್ಲಿ, ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದಿಂದ ಗುರುತಿಸಲಾಗಿರುವ ಅಪಘಾತ ಕಪ್ಪು ಸ್ಥಳಗಳನ್ನು ಸರಿಪಡಿಸಿ ಸರ್ವೋಚ್ಚ ನ್ಯಾಯಾಲಯದ ರಸ್ತೆ ಸುರಕ್ಷತಾ ಸಮಿತಿಗೆ ಕಾಲಕಾಲಕ್ಕೆ ಮಾಹಿತಿ ನೀಡುತ್ತಿದೆ.

**ಈ ಕೆಳಕಂಡ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ರಸ್ತೆ ಸುರಕ್ಷತಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:**

i) **ಲೆಕ್ಕ ಶೀರ್ಷಿಕೆ 3054-03-337-0-07-200 (ಎಸ್‌ಹೆಚ್)** ರಾಜ್ಯ ಹೆದ್ದಾರಿ ರಸ್ತೆ ಸುರಕ್ಷತಾ ನಿರ್ವಹಣೆ ಅಡಿಯಲ್ಲಿ ರಾಜ್ಯ ಹೆದ್ದಾರಿಗಳ ಮೇಲಿರುವ ಅಪಘಾತ ಕಪ್ಪು ಸ್ಥಳಗಳನ್ನು ಸರಿಪಡಿಸುವುದು ಹಾಗೂ ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

2) **ಲೆಕ್ಕ ಶೀರ್ಷಿಕೆ 3054-04-337-1-13-200 (ಎಂಡಿಆರ್)** ಜಿಲ್ಲಾ ಮುಖ್ಯ ರಸ್ತೆ ಮತ್ತು ಇತರ ರಸ್ತೆಗಳು – ರಸ್ತೆ ಸುರಕ್ಷತಾ ನಿರ್ವಹಣೆ ಅಡಿಯಲ್ಲಿ ಜಿಲ್ಲಾ ಮುಖ್ಯ ರಸ್ತೆಗಳ ಮೇಲಿರುವ ಅಪಘಾತ ಕಪ್ಪು ಸ್ಥಳಗಳನ್ನು ಸರಿಪಡಿಸುವುದು ಹಾಗೂ ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

3) **ಲೆಕ್ಕ ಶೀರ್ಷಿಕೆ "5054-05-337-4-02-154 ನಾಲೆಗಳ ಬದಿಯಲ್ಲಿ ರಸ್ತೆ ಸುರಕ್ಷತಾ ಕಾಮಗಾರಿಗಳು ಮತ್ತು ಬ್ಯಾರಿಕೇಡಿಂಗ್ ಸುಧಾರಣೆಗಳು"** ಅಡಿಯಲ್ಲಿ ಕೆರೆ ಏರಿಗಳು / ಜಲಮೂಲಗಳಲ್ಲಿ ಸುರಕ್ಷತೆಗಾಗಿ ಕ್ರಾಶ್ ಬ್ಯಾರಿಯರ್ ಮತ್ತು ಇತರೆ ರಸ್ತೆ ಸುರಕ್ಷತಾ ಕ್ರಮಗಳನ್ನು ಆದ್ಯತೆಯ ಮೇಲೆ ಕೈಗೊಳ್ಳುವುದು ಒಳಗೊಂಡಿರುತ್ತದೆ.

ರಸ್ತೆ ಸುರಕ್ಷತಾ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸಮಾಲೋಚಕರ ಸೇವೆಯನ್ನು ಪಡೆದು, ಅಂದಾಜು ಪಟ್ಟಿಯನ್ನು ತಯಾರಿಸಿ, ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಅನುಷ್ಠಾನಗೊಳಿಸಲು ಸಂಬಂಧಪಟ್ಟ ಲೋಕೋಪಯೋಗಿ ವಿಭಾಗದ ಕಾರ್ಯಪಾಲಕ ಇಂಜಿನಿಯರುಗಳು ಹಾಗೂ Project Monitoring Consultants ಗಳ ಉಸ್ತುವಾರಿಯೊಂದಿಗೆ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದೆ.

ಪ್ರಧಾನ ಇಂಜಿನಿಯರ್,
ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ,
ಲೋಕೋಪಯೋಗಿ ಇಲಾಖೆ, ಬೆಂಗಳೂರು.